ಕೆಲಸಕ್ಕೆ ರಾಜೀನಾಮೆ ಕೊಟ್ಟಳು. ಬಂದಿದ್ದ ಬೀಗರು ಗೆಳೆಯರು ಊಟವನ್ನು ಮದುವೆಯ ವರ್ಚಸ್ಸನ್ನೂ ಬಾಯ್ತುಂಬ ಹೊಗಳಿಕೊಳ್ಳುತ್ತ ತಮ್ಮ ಯಾವತ್ತಿನ ಜಿಂದಗಿಯ ಕುದುರೆಬಾಲ ಹಿಡಿದುಕೊಂಡು ಮರಳಿದರು. 'ನೀನೆ ಲಕ್ಕೀ ಕಣಯ್ಯಾ... ಸಣ್ಣ ಕ್ಯಾನವಾಸಿನಿಂದ ದೊಡ್ಡ ಕ್ಯಾನವಾಸಿನ ಗೂಡು ಸೇರಿದಿಯಾ' ಎಂದು ಗೆಳೆಯರು ವೈರಮುಡಿಯನ್ನು ಹೊಗಳಿದಾಗ ಮುಜುಗರದಿಂದ ನಾಯಿಮರಿಯಂತೆ ಮುದ್ದೆಯಾಗಿದ್ದನ್ನು ಸೇರಿಸಿ ಒಟ್ಟು ಅರವತ್ತಮೂರು ಮದುವೆ ಸೀರೀಸ್ ಪೇಂಟಿಂಗ್‌ಗಳನ್ನು ಮುಂದಿನ ಆರುತಿಂಗಳ ಸಂಸಾರದಲ್ಲಿ ರಚಿಸಿದ್ದ.

ಮೇಲುಪ್ಪರಿಗೆಯ ಒಂದು ಬೀಸಾದ ಕೋಣೆಯನ್ನು ಸ್ಟುಡಿಯೋ ಮಾಡಿಕೊಂಡಿದ್ದನಾಗಿ ದಿನವಹಿಯ ಹೆಚ್ಚಿನ ಸಮಯವನ್ನು ಅಲ್ಲಿಯೇ ಕಳೆಯುತ್ತಿದ್ದ. ದಿನ ಹೋಗಿ ದಿನ ಬಂದವು. ಬದುಕಿನ ದಾರಿಯಲ್ಲಿ ಯಾವ ಹೊಚ್ಚಹೊಸತನದ ಮೈಲಿಗಲ್ಲನ್ನು ದಾಟಲಿಲ್ಲವೆಂದುಕೊಂಡರೂ ವಿನಿತಾಳ ಕನಸಿಗೆ ಕೈಕಾಲು ಚಿಗುರಿ ಜೀವವೊಂದು ಬೆನ್ನಿಗಂಟಿದ ಬ್ರಹ್ಮಾಂಡದೊಳಗೆ ಆಕಾರಪಡೆಯುತ್ತಿತ್ತು. ಆ ಪುಟ್ಟ ಹೊಟ್ಟೆಯಲ್ಲಿನ ಕಂದಮ್ಮನನ್ನು ಎಷ್ಟು ಕಲ್ಪಿಸಿಕೊಂಡರೂ ಎಷ್ಟು ಬಾರಿ ಮುಟ್ಟಿದರೂ ಹೆಣ್ಣೋಗಂಡೋ ಎಂಬುದು ತಿಳಿಯದಾಗಿತ್ತು. ದಿನದಿಂದ ದಿನಕ್ಕೆ ಬಸುರಿ ಹೆಂಗಸಿನ ಮೈ ಬಂಗಾರ ಬಣ್ಣಕ್ಕೆ ತಿರುಗಿದಂತೆಲ್ಲ ಹುಟ್ಟುವ ಕೂಸಿಗೂ ವಿಚಿತ್ರವಾದ ಮೋಹಕಶಕ್ತಿ ದೈವದತ್ತವಾಗಿ ಬರುವುದೆಂದೇ ಆಶಿಸುತ್ತಿದ್ದ. ಕಾಲಿಗೆ ತೊಡರಾದಂತೆ ಎಡತಾಕುತ್ತಿದ್ದ ಅವಳ ಚೆಲುವನ್ನೊಮ್ಮೆ ಬೆತ್ತಲಾಗಿ ಬರೆಯಬೇಕೆಂದುಕೊಂಡ. ಧಾರವಾಡದ ಮಿರಗ ಮಳೆಯ ತಂಪುಹವೆ ಆತನಲ್ಲಿ ಅಂಥದ್ದೊಂದು ಕಲ್ಪನೆ ಕೊಟ್ಟಿತ್ತು. ಆದರೆ, ವಿನಿತಾ ಅದಕ್ಕೊಪ್ಪಲಿಲ್ಲ... ತಾನೀಗ ಮದುವೆಯಾಗಿರುವ ಹೆಂಗಸೆಂದೂ ಅಂಥ ಹುಚ್ಚುತನ ತನಗೆ ಸರಿಬರುವುದಿಲ್ಲವೆಂದು ಏಕಾಏಕಿ ಏರುಧ್ವನಿಯಲ್ಲಿ ಗುಡುಗಿದಳು. ಅರೆ! ಬೆಂಗಳೂರಿನ ಆ ಸಣ್ಣ ಕೋಣೆಯಲ್ಲಿ ಪುಸ್ತಕಗಳ ರಾಶಿಯ ಮೇಲೆ ಬೆತ್ತಲೆ ಕುಳಿತು ರೂಪದರ್ಶಿಯಾಗಿದ್ದ ಈ ಇವಳು ಈಗ ಬೇಡವೆನ್ನುತ್ತಿರುವುದು ಯಾಕೋ ಅತಿಯಾದಂತೆನಿಸಿತು. ಆಕ್ಚುವಲೀ ಆವತ್ತೆ ಕ್ಯಾನವಾಸಿನ ಮೇಲೆ ಅಚ್ಚೊತ್ತಿದ್ದರೆ ಈಗ ಹೆಂಗಸಾಗಿರುವ ಇವಳು ಹೀಗೆ ಮಾತಾಡುತ್ತಿದ್ದಳೆ? ಆ ದಿನ ವೈರಮುಡಿಯೇ ಈಗ ನಿನ್ನ ಚಿತ್ರ ಬಿಡಿಸುವುದು ಬೇಡ ನನ್ನವಳಾದ ಮೇಲೆ ಇದನ್ನೆಲ್ಲ ಇಟ್ಟುಕೊಳ್ಳೋಣ ಎಂದಿದ್ದ. ಯಜಮಾನಿ ಭಂಗಿಯಲ್ಲಿನ ಅವಳ ಗತ್ತುಗೈರತ್ತುಗಳು, ಮಾತಿನ ಧಾಟಿಯೂ ನಡವಳಿಕೆ, ತೀರ ಸಲಿಗೆಯ ಬೆಡ್‌ರೂಮಿನ ಏಕಾಂತದಲ್ಲಿನ ವರ್ತನೆಗಳು ಆಕ್ಚುವಲೀ ನಿಧಾನ ಬದಲಾಗುತ್ತಿರುವುದನ್ನು ಗಮನಿಸಿದ್ದ.

ದೇವರುದಿಂಡರು ಎಂಬುದಕ್ಕೆ ಕ್ಯಾರೆ ಅನ್ನದ ಸ್ವಭಾವದವಳು ಗಂಟೆಗಟ್ಟಲೆ ಜಪಮಾಡುವುದು, ಮಕ್ಕಳ ಕರುಣೆಸೆಂದು ಸೀಮೆಯ ದೇವರುಗಳಿಗೆ ಬೇಡಿಕೊಳ್ಳುವುದು, ದೇವಸ್ಥಾನಗಳಿಗೆ ಹೋಗಿಬರುವುದು ಹೀಗೆ ಶಾಣಪ್ಪನವರ ಆಸ್ತಿಯ ಭಾಗವಾಗಿಯೇ ಉಳಿದಿದ್ದ ವಿನಿತಾಳಲ್ಲಿ ಕಂಡುಮೋಹಿಸಿದ್ದ ತನ್ನಂತದೆ ಪ್ಯಾಲೆ ಪಾತ್ರವೊಂದು ಈಗ ಕಾಣದಿರುವುದು ಸೋಜಿಗ... ಟಿಪಿಕಲ್ ಹೆಂಗಸಿನಂತೆ ದೀಬರದಿಂಡಿಯ ಸೋಗು ಮಾಡುತ್ತಿದ್ದ ವಿನಿತಾಳಲ್ಲಿ ಬಸುರೊಂದನ್ನು ಬಿಟ್ಟರೆ ಬೇರೆ ಯಾವ ಸೊಗಸೂ ಏಕಾಂತದ ಮೋಹದ ಸೆಳೆತವೂ ಇಲ್ಲವಾಗಿ ಬೋರಾಗಿತ್ತು ಬದುಕು.

ಶ್ರಾವಣದ ಎರಡನೇ ಸೋಮುವಾರ ಊರಲ್ಲಿ ಮಳಿಯಪ್ಪಜ್ಜನ ಜಾತ್ರೆ ಇರುವುದಾಗಿಯೂ ತನಗೆ ಫಲ ನಿಂತರೆ ಬೆಳ್ಳಿಕುದುರೆ ಮಾಡಿಸುವುದಾಗಿ ಬೇಡಿಕೊಂಡಿದ್ದಕ್ಕಾಗಿ ವಿನಿತಾ ಊರಿಗೆ ಹೋಗಿದ್ದಳು. ಆವೊತ್ತು ಹುಬ್ಬಳ್ಳಿಯಿಂದ ಯಾವಳೋ ಒಬ್ಬ ಹೆಂಗಸನ್ನು ತನ್ನ ಬೆಡ್ ರೂಮಿಗೆ